# ಕಲ್ಪತರು ಟೈಮ್ಸ್

ಸಂಪುಟ: 2 | ಸಂಚಿಕೆ: 4 | ದಿನಾಂಕ: 19 ಸೆಪ್ಟೆಂಬರ್ 2019 | ತುಮಕೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಸಂಚಿಕೆ | ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ವಿವಿಗೆ 3-ಸ್ಟಾರ್ ಗರಿ



**ತುಮಕೂರು:** ಕೆಎಸ್‌ಯುಆರ್‌ಎಫ್ (ಕರ್ನಾಟಕ ಸ್ಟೇಟ್ ಯುನಿವರ್ಸಿಟೀಸ್ ರೇಟಿಂಗ್ ಫ್ರೇಂವರ್ಕ್) ರ‍್ಯಾಂಕಿಂಗ್‌ನಲ್ಲಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ 3-ಸ್ಟಾರ್ ಶ್ರೇಣಿ ಲಭಿಸಿದೆ. ಹಾಗೆಯೇ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ನಡೆಸಿದ 15 ವರ್ಷಕ್ಕಿಂತ ಮೇಲ್ಪಟ್ಟ ವಿಶ್ವವಿದ್ಯಾನಿಲಯಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ವಿವಿಗೆ ಎಂಟನೇ ಸ್ಥಾನ ಲಭಿಸಿದೆ. ಬೋಧನೆ, ಸಂಶೋಧನಾ ಶ್ರೇಷ್ಠತೆ, ಅನ್ವೇಷಣೆ, ಮೂಲಸೌಕರ್ಯ ಹಾಗೂ ಅಂತರ್ಗತ ಮತ್ತು ಸಾಮಾಜಿಕ ಪ್ರಭಾವದ ಆಧಾರದ ಮೇಲೆ ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ಪರಿಶೀಲಿಸಲಾಗಿದೆ. ತುಮಕೂರು ವಿವಿ ಸಂಶೋಧನಾ ಶ್ರೇಷ್ಠತೆ, ಒಳಗೊಳ್ಳುವಿಕೆ ಮತ್ತು ಸಾಮಾಜಿಕ ಪ್ರಭಾವದಲ್ಲಿ 4 ಸ್ಟಾರ್ ಪಡೆದಿದೆ.

> **"ಕೆಎಸ್‌ಯುಆರ್‌ಎಫ್ ತುಮಕೂರು ವಿವಿಗೆ 3 ಸ್ಟಾರ್ ನೀಡಿರುವುದು ಹೆಮ್ಮೆ ಪಡುವ ಸಂಗತಿ. ಕಳೆದ ಒಂದುವರೆ ವರ್ಷಗಳಿಂದ ವಿವಿಯು ತನ್ನ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವಲ್ಲಿ ಸತತವಾಗಿ ಪ್ರಯತ್ನಿಸಿತ್ತಿದ್ದು, ಅದರ ಫಲವಾಗಿ ಈ ಗೌರವ ಸಂದಿದೆ. ಮುಂದಿನ ದಿನಗಳಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿ, ವಿವಿಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಗುರುತಿಸಿಕೊಳ್ಳುವ ಸಂಕಲ್ಪ ಮಾಡುತ್ತೇವೆ.**
>
> **ಪ್ರೊ.ವೈ.ಎಸ್. ಸಿದ್ದೇಗೌಡ, ಕುಲಪತಿ**

ವರದಿ: ಉಮೇಶ್, ಕಾವ್ಯ ಎನ್.

## 'ವಿದ್ಯಾರ್ಥಿಗಳಲ್ಲಿ ಋಣಾತ್ಮಕ ಭಾವನೆ ಬಿತ್ತಬೇಡಿ'

### ವಿವಿಯಲ್ಲಿ ಎನ್‌ಎಸ್‌ಎಸ್ ಅಧಿಕಾರಿಗಳ ತರಬೇತಿ ಕಾರ್ಯಕ್ರಮ | ಸಹಕಾರ ಕುರಿತ ಚರ್ಚಾಸ್ಪರ್ಧೆ

ತುಮಕೂರು: ವಿದ್ಯಾರ್ಥಿಗಳ ಮನಸ್ಸಿನಲ್ಲಿ ಋಣಾತ್ಮಕ ಭಾವನೆಗಳನ್ನು ಬಿತ್ತಬೇಡಿ. ಶಿಸ್ತು, ತರಬೇತಿಯನ್ನು ನೀಡುವುದರ ಮೂಲಕ ಮಾನವರನ್ನಾಗಿ ಬೆಳೆಸಿ ಎಂದು ಬೆಂಗಳೂರಿನ ಗಾಂಧೀ ಭವನದ ಉಪಾಧ್ಯಕ್ಷ ಪ್ರೊ. ಜಿ.ಬಿ. ಶಿವರಾಜು ಹೇಳಿದರು.

ತುಮಕೂರು ವಿಶ್ವ ವಿದ್ಯಾನಿಲಯವು ರಾಜ್ಯ ಸಹಕಾರ ಮಹಾಮಂಡಳ, ರಾಷ್ಟ್ರೀಯ ಸೇವಾ ಯೊಜನೆ ಹಾಗೂ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶನಾಲಯದ ಜಂಟಿ ಆಶ್ರಯದಲ್ಲಿ ಸೆ.17ರಂದು ಆಯೋಜಿಸಿದ್ದ ಸಹಕಾರ ಕುರಿತ ಚರ್ಚಾಸ್ಪರ್ಧೆ ಮತ್ತು ಎನ್. ಎಸ್. ಎಸ್. ಅಧಿಕಾರಿಗಳ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇತ್ತೀಚೆಗೆ ಕುಳಿತು ಕೇಳುವ ತಾಳ್ಮೆ ಯಾರಿಗೂ ಇಲ್ಲ. ಅದನ್ನು ಯುವಕರಲ್ಲಿ ಬೆಳೆಸಬೇಕಿದೆ. ಉತ್ತಮ ರೀತಿಯ ಮಾರ್ಗದರ್ಶನ ನೀಡಿದರೆ ವಿದ್ಯಾರ್ಥಿ ಅಧ್ಯಾಪಕನಿಗಿಂತ ಹೆಚ್ಚಾಗಿ ಬೆಳೆಯಲು ಸಾಧ್ಯ ಎಂದರು. ಯುವಕರನ್ನು ನಾಲ್ಕು ಗೋಡೆಗಳ ಮಧ್ಯೆ ಕೂರಿಸಿ ಕಲಿಸುವುದು ಶಿಕ್ಷಣವಲ್ಲ. ಅವರಿಗೆ ಅರಿವು ನೀಡುವುದೇ ಶಿಕ್ಷಣ. ಯಾಂತ್ರಿಕ ಶಿಕ್ಷಣವನ್ನು ನೀಡುವುದರ ಬದಲು ಮೌಲ್ಯಾಧಾರಿತ ಶಿಕ್ಷಣ ನೀಡುವಲ್ಲಿ ಎನ್. ಎಸ್. ಎಸ್ ಸಾಧನವಾಗಬೇಕು ಎಂದರು.

ಎನ್‌ಎಸ್‌ಎಸ್ ಗಾಂಧೀಜಿಯವರ ಚಿಂತನೆಯಿಂದ ಹುಟ್ಟಿದ ಕೂಸು. ಬದ್ಧತೆಯಿಂದ ಎನ್‌ಎಸ್‌ಎಸ್ ಕಾರ್ಯ ಮಾಡಬೇಕು. ಅದಿಲ್ಲವಾದರೆ ಅದನ್ನು ಮುಚ್ಚಿಬಿಡುವುದೇ ಒಳ್ಳೆಯದು. ಪಠ್ಯಕ್ರಮಕ್ಕೆ ಸೀಮಿತವಾಗದೆ ಮಹತ್ತರ ವಿಚಾರಗಳನ್ನು ತಿಳಿಸಬೇಕು ಎಂದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಸನತ್ ಕುಮಾರ್ ಮಾತನಾಡಿ, ಹೆಚ್‌ಐವಿ ನಾವು ಬಯಸದೆ ಇದ್ದರೂ ಬರುವ ಕಾಯಿಲೆ. ಜೀವನ ಶೈಲಿಯನ್ನು ಬದಲಾಯಿಸಿಕೊಂಡರೆ ಮಾತ್ರ ಉತ್ತಮ ಆರೋಗ್ಯ ಎಲ್ಲರಿಗೂ ಲಭಿಸುತ್ತದೆ ಎಂದರು.



**ತುಮಕೂರು ವಿವಿಯಲ್ಲಿ ನಡೆದ ಎನ್‌ಎಸ್‌ಎಸ್ ಅಧಿಕಾರಿಗಳ ತರಬೇತಿ ಕಾರ್ಯಕ್ರಮ ಹಾಗೂ ಸಹಕಾರ ಕುರಿತ ವಿವಿ ಮಟ್ಟದ ಚರ್ಚಾ ಸ್ಪರ್ಧೆಯನ್ನು ಪ್ರೊ. ಜಿ. ಬಿ. ಶಿವರಾಜು ಉದ್ಘಾಟಿಸಿದರು. ಡಾ. ಸನತ್ ಕುಮಾರ್, ಪ್ರೊ. ಎಂ. ಕೊಟ್ರೇಶ್, ಮೋಹನ ಕುಮಾರಿ, ಡಾ. ವೈ. ಆರ್. ಸದಾಶಿವಯ್ಯ, ರೇಣುಕಾ ಪ್ರಸಾದ್ ಇದ್ದಾರೆ.**

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಪ್ರೊ. ಎಂ. ಕೊಟ್ರೇಶ್, ಜಿಲ್ಲಾ ಕ್ಷಯರೋಗ ಘಟಕದ ಮೋಹನ ಕುಮಾರಿ, ಡಾ. ವೈ. ಆರ್. ಸದಾಶಿವಯ್ಯ, ರೇಣುಕಾ ಪ್ರಸಾದ್ ಉಪಸ್ಥಿತರಿದ್ದರು. 'ರೈತರ ಆತ್ಮಹತ್ಯೆ ತಪ್ಪಿಸಲು ಸಹಕಾರ ಸಂಘಗಳು ನೆರವಾಗಬಲ್ಲವೇ?' ಕುರಿತು ಚರ್ಚಾಸ್ಪರ್ಧೆ ನಡೆಯಿತು. ಪ್ರೊ. ಪಿ. ಪರಮಶಿವಯ್ಯ, ಸಿಬಂತಿ ಪದ್ಮನಾಭ ಕೆ.ವಿ. ತೀರ್ಪುಗಾರರಾಗಿದ್ದರು.

ವರದಿ: ಸವಿತ ಜಿ.

### ವಿಜೇತರ ವಿವರ

ಚರ್ಚಾಸ್ಪರ್ಧೆಯಲ್ಲಿ ಸ್ನಾತಕೋತ್ತರ ವಿಭಾಗದಲ್ಲಿ ಡಾ. ಡಿವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದ ನವೀನ್ ಕುಮಾರ್ ಪಿ.ಆರ್.(ಪ್ರಥಮ), ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗದ ಪಾಂಡುರಂಗಯ್ಯ ಎನ್. (ದ್ವಿತೀಯ), ಪದವಿ ವಿಭಾಗದಲ್ಲಿ ವಿವಿ ಕಲಾ ಕಾಲೇಜಿನ ಪ್ರವೀಣ್ ಕುಮಾರ್ ಎನ್. (ಪ್ರಥಮ) ಹಾಗೂ ವಿವಿ ವಿಜ್ಞಾನ ಕಾಲೇಜಿನ ಉಮೇಶ್ ಬಿ.ಎಸ್. (ದ್ವಿತೀಯ) ಬಹುಮಾನ ಪಡೆದುಕೊಂಡಿದ್ದಾರೆ.

## ಸಂವಿಧಾನ ಇರುವುದು ಜನರ ಆಶೋತ್ತರಗಳ ಈಡೇರಿಕೆಗೆ: ಡಾ. ಮೀನಾಕ್ಷಿ ಖಂಡಿಮಠ




**ವಿವಿ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕಿ ಪ್ರೊ. ಮೀನಾಕ್ಷಿ ಖಂಡಿಮಠ ವಿಶೇಷ ಉಪನ್ಯಾಸ ನೀಡಿದರು. ಕೆ. ರಾಮಚಂದ್ರಪ್ಪ, ಟಿ. ಎನ್. ಹರಿಪ್ರಸಾದ್, ಡಾ. ಶ್ರೀಪಾದ ಕುಲಕರ್ಣಿ ಇದ್ದಾರೆ.**

**ತುಮಕೂರು:** ಸಂವಿಧಾನ ಇರುವುದು ಕೇವಲ ಆಡಳಿತಕ್ಕಾಗಿ ಅಲ್ಲ, ಜನರ ಆಶೋತ್ತರಗಳ ಈಡೇರಿಕೆಗಾಗಿ. ಇತಿಹಾಸವನ್ನು ಅರಿತುಕೊಳ್ಳದ ಹೊರತು ವರ್ತಮಾನವನ್ನು ಅರಿತುಕೊಳ್ಳಲು ಸಾಧ್ಯವಿಲ್ಲ ಎಂದು ತುಮಕೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗದ ಪ್ರಾಧ್ಯಾಪಕಿ ಡಾ. ಮೀನಾಕ್ಷಿ ಖಂಡಿಮಠ ಹೇಳಿದರು.

ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಸಭಾಂಗಣದಲ್ಲಿ ರಾಜ್ಯಶಾಸ್ತ್ರ ವಿಭಾಗ ವತಿಯಿಂದ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಭಾರತೀಯ ಸಂವಿಧಾನದ ಅಂತರ್ಗತ ಮೌಲ್ಯಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಭಾರತ ಸಂವಿಧಾನಲ್ಲಿರುವ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಗೌರವಿಸುವುದು ನಮ್ಮ ಜವಾಬ್ದಾರಿಯಾಗಿದೆ. ವಿಷಯವನ್ನು ತಿಳಿದುಕೊಂಡವರೆಲ್ಲ ಜ್ಞಾನಿಗಳಲ್ಲ. ಜನಸಾಮಾನ್ಯರಿಗೆ ಸಂವಿಧಾನದ ಅರಿವು ಮೂಡಿಸುವ ಅಗತ್ಯವಿದೆ ಎಂದ ಅವರು ಯಾವುದೇ ವಿಷಯವನ್ನು ಜೀವನಕ್ಕೆ ಅಳವಡಿಸಿಕೊಂಡರೆ ಮಾತ್ರ ಜೀವನ ಅರ್ಥಪೂರ್ಣವಾಗುತ್ತದೆ ಎಂದರು.

ಸಂವಿಧಾನದ ಅಂತರ್ಗತ ಮೌಲ್ಯಗಳನ್ನು ಅರಿತುಕೊಳ್ಳಬೇಕು. ನಮ್ಮ ದೇಶದ ವೈವಿಧ್ಯತೆಯನ್ನು ಜೀವಂತವಾಗಿರಿಸುವುದು ಸಂವಿಧಾನದ ಆಶಯವಾಗಿದೆ. ಎಲ್ಲಾ ಜಾತಿ, ಧರ್ಮಕ್ಕೆ ಸೇರಿದ ವ್ಯಕ್ತಿಗಳಿಗೆ ವಿಸ್ತರವಾದ ಅವಕಾಶ ನಮ್ಮ ಸಂವಿಧಾನದಲ್ಲಿದೆ. ಸಂವಿಧಾನವನ್ನು ಪ್ರೀತಿಸುವ ನಾಗರಿಕರಾಗಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಉಪಪ್ರಾಂಶುಪಾಲ ಟಿ. ಎನ್. ಹರಿಪ್ರಸಾದ್, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಶ್ರೀಪಾದ ಕುಲಕರ್ಣಿ ಉಪಸ್ಥಿತರಿದ್ದರು.

ವರದಿ: ನಿಸರ್ಗ ಸಿ ಎ.

## 'ದೇಶದ ಪ್ರಗತಿ ನಾಯಕತ್ವದ ಮೇಲೆ ಅವಲಂಬಿತ'

ತುಮಕೂರು: ಉತ್ತಮ ನಾಯಕನು ಹಲವು ಹೊಸ ನಾಯಕರ ಸೃಷ್ಟಿಗೆ ಕಾರಣವಾಗುತ್ತಾನೆ. ಒಂದು ದೇಶದ ಪ್ರಗತಿಯು ನಾಯಕತ್ವದ ಮೇಲೆ ಅವಲಂಬಿತವಾಗಿದೆ ಎಂದು ಮಾನವ ಸಂಪನ್ಮೂಲ ತರಬೇತುದಾರ ಎಚ್. ಪಿ ಸುರೇಶ್ ತಿಳಿಸಿದರು.

ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗವು ಸೆ.11ರಂದು ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.




**ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ತರಬೇತುದಾರ ಎಚ್. ಪಿ. ಸುರೇಶ್ ಅವರನ್ನು ಸನ್ಮಾನಿಸಲಾಯಿತು.**

ಭಾರತ ವಿಶಿಷ್ಟ ಚರಿತ್ರೆಯುಳ್ಳ ದೇಶ. ಇದಕ್ಕೆ ಅನೇಕ ಮಹನೀಯರ ಕೊಡುಗೆ ಇದೆ. ಗಾಂಧಿ, ಬುದ್ಧ, ಬಸವಣ್ಣ, ಅಂಬೇಡ್ಕರ್ ಹುಟ್ಟಿದ ನಾಡು ಇದು. ಯಾವುದೇ ದೇಶದ ಚರಿತ್ರೆಯನ್ನು ತಿಳಿದುಕೊಳ್ಳಬೇಕಾದರೆ ಆ ದೇಶದ ಮಹಾನ್ ನಾಯಕರ ಜೀವನ ಚರಿತ್ರೆಯನ್ನು ಮೊದಲು ತಿಳಿದುಕೊಳ್ಳಬೇಕು ಎಂದರು.

ನಾಯಕರ ಜೀವನದ ಹೋರಾಟಗಳು, ತ್ಯಾಗ ಬಲಿದಾನಗಳು ಮತ್ತು ಅವರ ಚಿಂತನೆಗಳು ದೇಶದ ಚರಿತ್ರೆಯ ಪ್ರಮುಖ ಅಂಶಗಳಾಗಿರುತ್ತವೆ. ಆದ್ದರಿಂದ ದೇಶದ ಚರಿತ್ರೆಯನ್ನು ಸೃಷ್ಟಿಸುವವರೇ ನಿಜವಾದ ನಾಯಕರಾಗುತ್ತಾರೆ ಎಂದರು.

ಒಬ್ಬ ಉತ್ತಮ ನಾಯಕನಿಗೆ ಪ್ರಾಮಾಣಿಕತೆ ಇರಬೇಕು. ಒಬ್ಬ ತಾಯಿ ತನ್ನ ಕರ್ತವ್ಯ ಪ್ರಾಮಾಣಿಕತೆಯನ್ನು ಮಕ್ಕಳ ಏಳಿಗೆಗಾಗಿ ಹೇಗೆ ನಿರ್ವಹಿಸುತ್ತಾಳೋ, ಹಾಗೆ ನಾಯಕನಾದಂತಹವನು ಅತ್ಯಂತ ಜವಾಬ್ದಾರಿಯಿಂದ ಸಮಾಜದ ಪ್ರಗತಿಯಲ್ಲಿ ಭಾಗಿಯಾಗಬೇಕು ಎಂದರು.

ನಾಯಕನು ಚಿಂತನಾ ಶೀಲನಾಗಿ, ಸೃಜನಶೀಲತೆಯನ್ನು ಅಳವಡಿಸಿಕೊಂಡಿರಬೇಕು. 'ಕೋಪಂ ಅನರ್ಥ ಸಾಧನಂ' ಎಂಬುದನ್ನು ಅರಿತು ತಾಳ್ಮೆಯಿಂದ ವರ್ತಿಸಬೇಕು ಎಂದ ಅವರು ಮಹಾನ್ ನಾಯಕರು ತಮ್ಮ ಜೀವನದಲ್ಲಿ ಅನುಭವಿಸಿದ ದುಃಖ-ದುಮ್ಮಾನಗಳನ್ನು ಉದಾಹರಣೆಗಳ ಸಮೇತ ವಿವರಿಸಿದರು.

ನಾಯಕನು ತನ್ನದೇ ಆದ ವಿಶಿಷ್ಟ ಜ್ಞಾನವನ್ನು ಹೊಂದಿದ್ದು ಉತ್ತಮ ಸಂವಹನಕಾರನಾಗಿರಬೇಕು. ದೇಶದ ಸಮಕಾಲೀನ ಸಮಸ್ಯೆಗಳ ಬಗ್ಗೆ ನಿರಂತರ ಅಧ್ಯಯನ ಮಾಡಬೇಕೆಂದರು.

ತನ್ನ ಗುರಿಗಳನ್ನು ಮುಟ್ಟುವ ಪ್ರಯತ್ನದಲ್ಲಿ ವಿಫಲನಾದಾಗ ಎದೆಗುಂದದೆ ದೂರದೃಷ್ಟಿ ಮತ್ತು ಜಾಣ್ಮೆಯಿಂದ ತಪ್ಪುಗಳನ್ನು ಗ್ರಹಿಸಿ, ತಿದ್ದಿಕೊಂಡು ಮರಳಿ ಪ್ರಯತ್ನ ಮಾಡಿ ಜೀವನದಲ್ಲಿ ಗೆಲ್ಲುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಇಂತಹ ದಿಟ್ಟ ನಾಯಕರ ಕೊರತೆ ನಮ್ಮ ದೇಶದಲ್ಲಿ ಎದ್ದು ಕಾಣುತ್ತಿದೆ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಭಾಗದ ಮುಖ್ಯಸ್ಥ ಪ್ರೊ. ಬಿ. ಶೇಖರ್ ವಿದ್ಯಾರ್ಥಿಗಳು ತಮಗೆ ದೊರೆಯುವ ಅವಕಾಶಗಳನ್ನು ಉಪಯೋಗಿಸಿಕೊಂಡು ಭವಿಷ್ಯದಲ್ಲಿ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕು ಎಂದರು.

ಪ್ರಾಧ್ಯಾಪಕ ಪ್ರೊ. ಪಿ. ಪರಮಶಿವಯ್ಯ, ಪ್ರೊ. ಜಿ ಸುದರ್ಶನ ರೆಡ್ಡಿ, ಡಾ. ಬಿ.ಕೆ.ಸುರೇಶ್, ಡಾ. ದೇವರಾಜಪ್ಪ, ಡಾ. ಶಿವಶಂಕರ್, ವಿಜಯ್ ಎನ್. ಭವ್ಯಶ್ರೀ ಇದ್ದರು.

## ಸಂಪಾದಕೀಯ

# ಭಾಷೆ ಮತ್ತು ಸಾಮರಸ್ಯ

ಒಂದು ದೇಶ, ಒಂದು ಭಾಷೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆ ಹೊಸ ವಿವಾದವನ್ನು ಹುಟ್ಟು ಹಾಕಿದೆ. ಶಾ ಅವರು ಹಿಂದಿ ದಿನದಂದು ಮಾಡಿದ ಟ್ವೀಟ್‌ಗೆ ದಕ್ಷಿಣ ಭಾರತದೆಲ್ಲೆಡೆ ವಿರೋಧ ವ್ಯಕ್ತವಾಗಿದೆ.

ಜಾಗತಿಕ ಮಟ್ಟದಲ್ಲಿ ಭಾರತೀಯ ಭಾಷೆಯಾಗಿ ಗುರುತಿಸಿಕೊಳ್ಳಲು ಒಂದು ಭಾಷೆಯ ಅವಶ್ಯಕತೆ ಇದೆ. ಅತಿ ಹೆಚ್ಚು ಜನ ಮಾತನಾಡುವ ಹಿಂದಿ ಮಾತ್ರ ಇಡೀ ದೇಶವನ್ನು ಒಂದಾಗಿ ಬೆಸೆಯುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿರುವುದು ಹಿಂದಿ ಹೇರಿಕೆಯನ್ನು ಮುನ್ನಲೆಗೆ ತಂದಿದೆ. ಹಿಂದಿ ಹೇರಿಕೆಯನ್ನು ವಿರೋಧಿಸಿ ಕರ್ನಾಟಕ, ಪಶ್ಚಿಮ ಬಂಗಾಳ, ಆಂದ್ರ ಪ್ರದೇಶ, ತೆಲಂಗಾಣ, ತಮಿಳನಾಡು, ಕೇರಳ, ರಾಜ್ಯಗಳಲ್ಲಿ ಸ್ವಯಂ ಪ್ರೇರಿತ ಪ್ರತಿಭಟನೆ ನಡೆಯುತ್ತಿವೆ.

ಭಾರತದಲ್ಲಿರುವ 22 ಅಧಿಕೃತ ಭಾಷೆಗಳಲ್ಲಿ ಹಿಂದಿ ಭಾಷೆಯು ಕೂಡ ಒಂದಾಗಿದೆ. ಹೀಗಿರುವಾಗ ಒಂದು ದೇಶ, ಒಂದು ಭಾಷೆ, ಎನ್ನುವ ಪ್ರತಿಪಾದನೆ ಸರಿಯಲ್ಲ, ಜಾಗತಿಕ ಮಟ್ಟದಲ್ಲಿ ಭಾರತವು ತನ್ನ ವಿವಿಧತೆಯಲ್ಲಿ ಏಕತೆ ಎಂಬ ಸಿದ್ಧಾಂತದಿಂದ ಗುರುತಿಸಿಕೊಂಡಿರುವುದರಿಂದ ಭಾರತವನ್ನು ಪ್ರತಿನಿಧಿಸಲು ಒಂದು ಭಾಷೆ ಅಗತ್ಯವಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಹಿಂದಿಯೇತರ ರಾಜ್ಯಗಳ ಮೇಲೆ ಹೀಗೆ ಹಿಂದಿ ಭಾಷೆಯನ್ನು ಹೇರುವ ಪ್ರಯತ್ನವು ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರಬಹುದು. ಈ ನಡುವೆ ಮುಖ್ಯಮಂತ್ರಿ ಯಡಿಯೂರಪ್ಪ ಭಾರತೀಯ ಸಂವಿಧಾನ ಅಂಗೀಕರಿಸಿದ ಭಾಷೆಗಳಲ್ಲಿ ಯಾವುದೇ ತಾರತಮ್ಯ ಸಲ್ಲದು. ರಾಜ್ಯದಲ್ಲಿ ಕನ್ನಡವೇ ಅಧಿಕೃತ ಭಾಷೆ ಎಂದು ಟ್ವೀಟ್ ಮಾಡಿರುವುದು ಒಂದು ಗಮನಾರ್ಹ ಅಂಶವಾಗಿದೆ. ಭಾಷಾ ಹೇರಿಕೆಯ ಚರ್ಚೆ ಕಾವೇರುತ್ತಿರುವ ನಡುವೆಯೇ, ತಾನೆಂದೂ ಹಿಂದಿಯನ್ನು ಹೇರುವ ಮಾತಾಡಿಲ್ಲ, ಅದನ್ನು ಎರಡನೇ ಭಾಷೆಯಾಗಿ ಪರಿಗಣಿಸಬೇಕು, ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗೆ ತನ್ನ ಬೆಂಬಲ ಸದಾ ಇದೆ ಎಂದು ಶಾ ಸ್ಪಷ್ಟೀಕರಣ ನೀಡಿದ್ದಾರೆ ಎಂಬುದನ್ನೂ ಗಮನಿಸಬೇಕು.

ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿದೆ. ನಮ್ಮ ಶಿಕ್ಷಣ ಕ್ಷೇತ್ರ, ಅದರಲ್ಲೂ ಪ್ರಾಥಮಿಕ ಶಿಕ್ಷಣ ದಲ್ಲಿ ಇಂಗ್ಲೀಷ್ ಭಾರದಲ್ಲಿ ಸೊರಗಿರುವ ಈ ಹೊತ್ತು ಬೇರೆ ಯಾವ ಒತ್ತಡವೂ ಹೇರಿಕೆಯಾಗಿ ಕಂಡರೆ ಅಚ್ಚರಿಯೇನೂ ಇಲ್ಲ. ಭಾಷೆ ನಮ್ಮನ್ನೆಲ್ಲ ಬೆಸೆಯುವ ಕೊಂಡಿಯಾಗಬೇಕೇ ಹೊರತು, ಜನರನ್ನು ಒಡೆಯುವ, ಪ್ರರಸ್ಪರ ಎತ್ತಿಕಟ್ಟುವ ಮತ್ತು ಆ ಮೂಲಕ ಕಲಹಗಳಿಗೆ ಕಾರಣವಾಗುವ ಅಸ್ತ್ರವಾಗಬಾರದು. ಹೆಚ್ಚು ಭಾಷೆಗಳನ್ನು ಕಲಿಯುವುದು ಜ್ಞಾನದಿಗಂತದ ವಿಸ್ತರಣೆಗೆ ಪೂರಕ. ಆದರೆ ಅದು ಸಹಜವಾಗಿ ಬರಬೇಕೇ ಹೊರತು ಯಾವುದೇ ಒತ್ತಾಯದಿಂದ ಅಲ್ಲ.

# ಹುಟ್ಟು ಹಬ್ಬಕ್ಕೆ ಚಾರಣದ ಸಂಭ್ರಮ

ನನ್ನ ಮೊಬೈಲ್‌ಗೆ ಅಂದು ಬೆಳಗ್ಗೆ ಬಿಡುವಿಲ್ಲದೇ ಮೆಸೆಜ್‌ಗಳು ಬರುತ್ತಲೇ ಇದ್ದವು. ಏನಾಯ್ತು, ಇಂದು ಫೋನ್ ಒಂದು ನಿಮಿಷವೂ ಬಿಡುವಿಲ್ಲದೆ ಬಡಿದುಕೊಳ್ಳುತ್ತಲೇ ಇದೆಯಲ್ಲ ಎಂದು ನಿದ್ದೆಗಣ್ಣಿನಲ್ಲಿ ತಡವರಿಸುತ್ತಾ ಮೊಬೈಲ್ ನೋಡಿದ್ರೆ, ನನ್ನ ಹುಟ್ಟುಹಬ್ಬಕ್ಕೆ ಶುಭಾಶಯಗಳು ಬರುತ್ತಲೇ ಇದ್ದವು. ಇಂದು ನನ್ನ ಹುಟ್ಟುಹಬ್ಬ ಎನ್ನುವುದನ್ನ ನಾನೇ ಮರೆತಿದ್ದೆ; ಅದನ್ನು ನೆನಪಿಸಿದ ಸಂದೇಶಗಳಿಗೆ ಧನ್ಯವಾದ ಹೇಳುತ್ತಾ ಎಂದಿನಂತೆ ಕಾಲೇಜಿನ ಹಾದಿ ಹಿಡಿದೆ.

ಬರುವ ಹಾದಿಯಲ್ಲೇ ನನಗೆ ಅಚ್ಚರಿಗಳ ಸಾಲೇ ಕಾದಿತ್ತು. ಹುಟ್ಟುಹಬ್ಬದ ವಿಶೇಷ ಅಪ್ಪನ ಕಡೆಯಿಂದ ಹೊಸ ಬಟ್ಟೆ ಉಡುಗೊರೆಯಾಗಿ ದೊರೆಯಿತು. ಬೆನ್ನು ಹತ್ತಿದ ಬೇತಾಳನಂತೆ ನನ್ನ ತಂಗಿಯ ಜವಬ್ದಾರಿ ಅಂದು ನನ್ನ ಮೇಲೆಯೇ ಬಿತ್ತು. ಅಂತೂ ಫ್ರೆಂಡ್ಸ್ ಬರೋದಕ್ಕೆ ಹೇಳಿದ್ರಲ್ಲಾ ಅಂತ ಬಸ್ ಸ್ಟಾಂಡ್‌ಗೆ ಬಂದು ಕುಳಿತದ್ದಾಯಿತು. ಒಬ್ಬರ ಹಿಂದೆ ಒಬ್ಬರು ಎಂಬಂತೆ ನನ್ನ ಗುಂಪಿನ ಸದಸ್ಯರು ಸೇರುವಲ್ಲಿಗೆ ನನ್ನ ಬರ್ತ್‌ಡೇ ಆಚರಣೆ ಶಿವಗಂಗೆ ಬೆಟ್ಟದಲ್ಲಿ ಅನ್ನೋದು ಫಿಕ್ಸ್ ಆಯ್ತು. ಇಷ್ಟಕ್ಕೂ ಸೆಲೆಬ್ರೇಶನ್ ಇದೇ ಅಂತ ನನಗೆ ಗೊತ್ತೇ ಇರಲಿಲ್ಲ.

ಅಂತೂ ನಾವು ಏಳು ಜನ ಶಿವಗಂಗೆ ಬೆಟ್ಟದ ಕಡೆ ಹೋಗುವ ಬಸ್ಸಿಗೆ ಹತ್ತಿ ಹೊರಟೆವು. ಇಲ್ಲಿಂದ ನಮ್ಮ ಚಾರಣ ಶುರುವಾಯಿತು. ಆರಂಭದಲ್ಲಿ ಎಲ್ಲರೂ ಸಂತಸದಿಂದಲೇ ಬೆಟ್ಟ ಹತ್ತುವುದಕ್ಕೆ ಶುರುಮಾಡಿದೆವು. ಸ್ನೇಹಿತರಾದ ಚಂದನ್ ಷಣ್ಮುಖಾರಾಧ್ಯ ಇಬ್ಬರೂ ಅನ್ಯ ಕಾರಣಗಳಿಂದ ಬರಲಾಗಲಿಲ್ಲ. ಆದ್ದ-ರಿಂದ ನಮ್ಮ ಗುಂಪಿನಲ್ಲಿ ಇದ್ದ ಏಕೈಕ ಗಂಡು ಜೀವಿ ಅಂದ್ರೆ ಉಮೇಶ್ ಮಾತ್ರ. ಅವನೇ ನಮ್ಮ ಚಾರಣಕ್ಕೆ ಮಾರ್ಗದರ್ಶಿಯೂ ಆಗಿದ್ದ. ಬೆಟ್ಟದ ತುದಿಯಲ್ಲಿ ಕೇಕ್ ಕಟ್ ಮಾಡಬೇಕು ಅನ್ನೋದು ನಮ್ಮ ಸ್ನೇಹಿತರ ಪ್ಲಾನ್ ಇತ್ತು.



ಆದ್ರೆ ಅರ್ಧಕ್ಕೆ ನಮ್ಮ ಎನರ್ಜಿ ಟುಸ್ ಪಟಾಕಿ ಆಗಿದ್ರಿಂದ ಬೆಟ್ಟ ಪೂರ್ತಿ ಹತ್ತೋ ಮೊದಲೇ ಕೇಕ್ ಕತ್ತರಿಸಿ ಹುಟ್ಟು ಹಬ್ಬ ಆಚರಿಸಿದ್ದಾಯಿತು.

ನಮ್ಮ ಫೋಟೋ ಸೆಶನ್ ಮುಗಿಸಿ ಮುಂದಿನ ಹಂತಕ್ಕೆ ನಮ್ಮ ಪ್ರಯಾಣ ಮುಂದುವರೆಯಿತು. ಇಲ್ಲಿಯವರೆಗೂ ಬೆಟ್ಟ ಹತ್ತುವುದಕ್ಕೆ ಇದ್ದಂತ ದಾರಿ ಕಷ್ಟವಾಗಿರಲಿಲ್ಲ. ಇನ್ನು ಮುಂದೆ ಇರುವ ದಾರಿ ತುಂಬಾ ಕಠಿಣವಾದುದು. ಕಡಿದಾದ ಜಾಗಗಳು, ಕಲ್ಲಿನ ಮೆಟ್ಟಿಲುಗಳು, ಬೀಳದಂತೆ ಹಿಡಿದುಕೊಳ್ಳೋಕೆ ಅಕ್ಕ-ಪಕ್ಕದ ಕಬ್ಬಿಣದ ಗ್ರೀಲ್‌ಗಳು, ಅವುಗಳೇನು ಅಷ್ಟು ಸುರಕ್ಷಿತವಾಗಿರಲಿಲ್ಲ ತುಕ್ಕು ಹಿಡಿದು ಹಾಳಾಗಿದ್ದವು. ಆದರೂ ಬೆಟ್ಟ ಹತ್ತುವ ಛಲ ನಮ್ಮನ್ನು ಮುಂದಕ್ಕೆ ನೂಕಿತು.

ಬೆಟ್ಟವನ್ನು ಮುಕ್ಕಾಲು ಭಾಗ ತಲುಪುವಲ್ಲಿಗೆ 'ಹೊಳಕಲ್ಲು ತೀರ್ಥ' ಅನ್ನು ಜಾಗ ಸಿಕ್ತು. ಇಲ್ಲಿ ನಾವು ಅಂದುಕೊಂಡಿದ್ದು ನೇರವೇರುತ್ತೆ ಏನ್ನುವುದಾದ್ರೆ ಹೊಳಕಲ್ಲಿನಲ್ಲಿ ಕೈ ಹಾಕಿದ್ರೆ ನೀರು ಸಿಗುತ್ತೆ -ಇದು ಸ್ಥಳೀಯರ ನಂಬಿಕೆ. ನನಗೆ ನೀರು ಸಿಗೋದು ಇರಲಿ, ಹೊಳಕಲ್ಲು ತೀರ್ಥ ಸುತ್ತಿ ಬರುವಾಗಲೇ ಜಾರಿ ಬಿದ್ದು ಸೊಂಟ ಮುರಿದುಕೊಳ್ಳುವ ಪ್ರಸಾದ ಸಿಕ್ತು.

ಅಲ್ಲಿಂದ ಮುಂದೆ ನಮ್ಮ ಹಾದಿ ನಂದಿ ವಿಗ್ರಹದ ಬಳಿ ಸಾಗಿತ್ತು. ಇಲ್ಲಂತೂ ನಮ್ಮನ್ನು ಸ್ವಾಗತಿಸುವುದಕ್ಕೆ ನಮ್ಮ ಪೂರ್ವಿಕರು ನಮಗೋಸ್ಕರ ಕಾಯ್ತಾ ಕೂತಿ-ದ್ದರು. ಬಂಡೆಗಳ ನಡುವೆ ಇರುವ ಕಿರಿದಾದ ಜಾಗದ ಮೇಲೆ ಸಾಗಿದರೆ ಮಾತ್ರ ಬೆಟ್ಟದ ತುದಿಯನ್ನು ತಲುಪಲು ಸಾಧ್ಯ. ಹೆಗಲ ಮೇಲೆ ಬ್ಯಾಗು, ಅದನ್ನು ಕಸಿದುಕೊಳ್ಳಲು ಕಪಿಗಳು ಒಂದಾದ ಮೇಲೆ ಒಂದರಂತೆ ಲಗ್ಗೆ ಇಡುತ್ತಿದ್ದವು. ಹೆಜ್ಜೆ ಹೆಜ್ಜೆಗೂ ಕಿಟಾರ್ ಅಂತ ಕಿರುಚಿಕೊಳ್ಳುವ ಶಬ್ದ. ನನ್ನ ತಂಗಿಯಂತೂ ಉಮೇಶನ ಕೈ ಬಿಟ್ಟೇ ಇರಲಿಲ್ಲ. ಅಣ್ಣಾ ಅಂತ ಹಿಂದೆಯೇ ಸುತ್ತುತ್ತಿದ್ದಳು.

ಇವೆಲ್ಲವನ್ನೂ ಮೀರಿ 2640.3 ಅಡಿ ಎತ್ತರದ ಬೆಟ್ಟದ ತುತ್ತ ತುದಿಗೆ ಹತ್ತಿ ನಿಂತಾಗ, ಸುತ್ತಲೂ ಹಸಿರು, ಮೋಡ ಕವಿದ ವಾತಾವರಣ, ರೊಯ್ಯನೆ



ಬೀಸುವ ತಂಗಾಳಿಗೆ ಮೈಯೊಡ್ಡಿ ನಿಂತರೆ ಸ್ವರ್ಗಕ್ಕೆ ಮೂರೇ ಗೇಣು ಎನ್ನುವ ರೋಮಾಂಚನದ ಭಾವ. ಬೆಟ್ಟದ ತುದಿಗೆ ಏರಿದ ಖುಷಿಯಲ್ಲಿ ನಮ್ಮ ಕಪಿಸೈನ್ಯವೂ ಸಹ ಸೆಲ್ಫೀಗೆ ಫೋಸ್ ಕೊಟ್ಟು, ಶಿವನ ದರ್ಶನ ಮುಗಿಸಿಕೊಂಡು ಹಿಂದಿರುಗುವಾಗ ಜೋರು ಮಳೆ ಶುರುವಾಯಿತು. ಸುರಿವ ಮಳೆಯಲ್ಲಿಯೇ ಜಾರೋ ಕಲ್ಲುಗಳ ಮೇಲೆ ಕಾಲಿಟ್ಟು ಎದ್ದು ಬಿದ್ದು ಬೆಟ್ಟ ಇಳಿವಾಗ ಮನಸ್ಸಲ್ಲಿ ಮಾತ್ರ 'ಥೂ ಹಾಳಾದ್ ಇವತ್ತು ನನ್ನ ಬರ್ತ್‌ಡೇ ಅಥವಾ ಡೆತ್ ಡೇ ನಾ' ಅನ್ನೋ ಠಕ್ಕರ್ ಮಾತುಗಳು ಶುರುವಾಗಿದ್ದವು.

ಅಂತೂ 'ಬರ್ತ್‌ಡೇ ದಿನದ' ಚಾರಣವನ್ನೂ ತುಂಬಾ ಎಂಜಾಯ್ ಮಾಡಿದೆವು. ಸಂಜೆಯಾಗುತ್ತಲೇ ಶಿವಗಂಗೆಯಿಂದ ಹಿಂದಿರುಗುವಾಗ ಎಲ್ಲರ ಮುಖಗಳು ಕಳೆಗುಂದಿದ್ದವು. ತುಮಕೂರಿಗೆ ವಾಪಸ್ ಬರುವಾಗ ಬಸ್ಸಲೇ ಎಲ್ಲರೂ ನಿದ್ದೆಗೆ ಜಾರಿದ್ದರು. ಪಾಪ ನನ್ನ ಗೆಳತಿ ಬೆಟ್ಟ ಹತ್ತಿ ಹುಷಾರ್ ತಪ್ಪಿದ್ದಳು. ಮನೆಗೆ ಬಂದಾಗ ನನ್ನ ಕಾಲುಗಳು ಪದ ಹೇಳೋದಕ್ಕೆ ಶುರುಮಾಡಿದ್ದವು. ಅಂತೂ ಬರ್ತ್‌ಡೇ ನಾ ಬೆಟ್ಟ ಹತ್ತಿಸುವ ಮೂಲಕ ಆಚರಿಸಿದ ನನ್ನ ಸ್ನೇಹಿತರಿಗೆ ನಾನು ಧನ್ಯವಾದ ಹೇಳಲೇಬೇಕು...

**ಕಾವ್ಯ ಎನ್.**

# ಸಮಯ ಪ್ರಜ್ಞೆಯಲ್ಲಿದೆ ಸಾರ್ಥಕತೆ

ಸಮಯ ಪ್ರತಿ ಜೀವಿಗೂ ಅಮೂಲ್ಯ. ಹಣ ಕಳೆದರೆ ಮತ್ತೆ ಸಂಪಾದಿಸಬಹುದು, ಆರೋಗ್ಯ ಹಾಳಾದರೂ ಪುನಃ ಪಡೆಯಬಹುದು, ಆದರೆ ವಯಸ್ಸು ಮತ್ತು ಸಮಯವನ್ನು ಹಿಂಪಡೆಯಲು ಸಾಧ್ಯವಿಲ್ಲ. ಕಳೆದುಹೋದ ಸಮಯ ಯಾವುದೇ ಕಾರಣಕ್ಕೂ ಮರಳಿ ಬರುವುದಿಲ್ಲ. ಅದ್ದರಿಂದಲೇ ನಾವು ಸಮಯದ ಸದುಪಯೋಗ ಮಾಡಿಕೊಳ್ಳಬೇಕು. ಪಡೆದುಕೊಳ್ಳಬಹುದು. ಅಷ್ಟೇ ಅಲ್ಲದೇ, ಬದುಕಿಗೆ ಒಂದು ಗುರಿಯನ್ನು ಇಟ್ಟುಕೊಳ್ಳಬೇಕು. ಅದು ಸಾಹಿತ್ಯ, ಸಂಗೀತ, ಕಲೆ, ನೃತ್ಯ, ಮತ್ಯಾವುದೇ ರೂಪದಲ್ಲಿರಬಹುದು. ಸಮಯದ ಸದುಪಯೋಗ ಮಾಡಿಕೊಂಡು ನಮ್ಮ ಗುರಿಯನ್ನು ಮುಟ್ಟುವುದರಿಂದ ಜೀವನದ ಸಾರ್ಥಕತೆಯ ನೆಮ್ಮದಿ ದೊ-ರೆಯುತ್ತದೆ.

ಎಷ್ಟೋ ಜನ ಅನವಶ್ಯಕವಾಗಿ ಕಾಲಹರಣ ಮಾಡುತ್ತಾರೆ. ಚಿಕ್ಕ ಮಕ್ಕಳದ್ದು ಒಂದು ರೀತಿಯ ಕಾಲ ಹರಣವಾದರೆ, ಗೃಹಿಣಿಯವರದ್ದೊಂದು ರೀತಿಯ ಕಾಲಹರಣ. ಜೊತೆಗಾರ್ತಿಯವರೊಂದಿಗೆ ಸೇರಿ ಅವರಿವರ ಬಗ್ಗೆ ಮಾತನಾಡಿಕೊಳ್ಳುತ್ತಾ ತಮ್ಮ ಸಮಯ ವ್ಯರ್ಥ ಮಾಡಿಕೊಳ್ಳುತ್ತಾರೆ. ಅದರ ಬದಲು ಆ ಸಮಯವನ್ನು ಮನೆಗೆಲಸ ಮಾಡುವಲ್ಲಿ, ಒಂದು ಒಳ್ಳೆಯ ಪುಸ್ತಕ ಓದವಲ್ಲಿ ಅಥವಾ ಬರೆಯುವಲ್ಲಿ ಇಂತಹ ಮತ್ಯಾವುದಾದರೂ ಉಪಯುಕ್ತ ಕೆಲಸಕ್ಕೆ ತಮ್ಮ ಸಮಯ ಬಳಸಿಕೊಂಡರೆ ಅವರಿಗೇ ಒಳ್ಳೆಯದು.



ಸಮಯ ಬಹಳ ಮಹತ್ವಪೂರ್ಣಬಾದದ್ದು. ಆದ್ದ-ರಿಂದ ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಸಮಯವನ್ನು ನಿಗದಿಪಡಿಸಿಕೊಳ್ಳುವುದು, ಒಳ್ಳೆಯ ಆಟ, ಊಟ, ವ್ಯಾಯಾಮ, ಓದು, ನಿದ್ದೆ, ಹೀಗೆ ಎಲ್ಲದ್ದಕ್ಕೂ ಒಂದೊಂದು ಸಮಯ ನಿಗದಿಪಡಿಸಬೇಕು. ಆಯಾ ಕೆಲಸ ಅದೇ ಸಮಯದಲ್ಲಿ ಮಾಡುವುದರಿಂದ ದಿನಚರಿಯನ್ನು ಕ್ರಮಬದ್ದವಾಗಿ ಇಟ್ಟು ಸಮಯವನ್ನು ಸದುಪಯೋಗಪಡಿಸಿಕೊಳ್ಳಬಹುದು.

ನಮ್ಮ ಮನಸ್ಸಿಗೆ ಇಷ್ಟವಾದ ಕೆಲಸಗಳನ್ನು ಮಾಡುವುದರಿಂದ ಮನಸ್ಸಿಗೆ ಶಾಂತಿ, ಸಮಾಧಾನ, ತೃಪ್ತಿ

ಬದುಕೇ ಒಂದು ತಪಸ್ಸಿನಂತೆ. ನಮ್ಮನ್ನು ನಾವು ಸದೃಢರನ್ನಾಗಿಸಿಕೊಳ್ಳಬೇಕು. ಕೆಟ್ಟದ್ದನ್ನು ನೋಡುವುದು, ಯೋಚಿಸುವುದು, ಹೀಗೆ ಮುಂತಾದ ಋಣಾತ್ಮಕ ಕಾರ್ಯಗಳಿಂದ ದೂರವಿದ್ದು, ನಮ್ಮ ಜೀವನದ ಅಮೂಲ್ಯವಾದ ಸಮಯವು ಹಾಳಾಗದಂತೆ ನೋಡಿಕೊಳ್ಳಬೇಕು.

ಇರುವಷ್ಟು ದಿನವೂ ಒಳ್ಳೆಯ ರೀತಿಯಲ್ಲಿ ಒದುಕಿ ನಾಲ್ಕು ಜನರಿಂದ ಸೈ ಎನಿಸಿಕೊಳ್ಳಬೇಕು. ಹೀಗೆ ಪ್ರತಿಯೊಂದು ಕೆಲಸಕ್ಕೆ ಪ್ರತಿಯೊಂದು ಸಮಯವನ್ನು ಮೀಸಲಾಗಿಡುವುದರಿಂದ ಜೀವನದಲ್ಲಿ ಗುರಿ ತಲುಪಿ, ಜೀವನವನ್ನು ಶಿಸ್ತುಬದ್ಧವಾಗಿ ರೂಪಿಸಲು ಸಾಧ್ಯವಾಗುತ್ತದೆ. ಎಷ್ಟೋ ಜನರು ದಕ್ಷತೆಯಿಂದ ಕಲಿತು, ಸಾಧನೆ ಮಾಡಿರುವ ಚರಿತ್ರೆಯ ಪುಟಗಳು ನಮಗೆ ಕಾಣುತ್ತವೆ.

ಜೀವನದಲ್ಲಿ ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದ್ದು ಎಂಬ ಪರಿಜ್ಞಾನ ಇರಬೇಕು. ಅದರ ಆಧಾರದ ಮೇಲೆ ಬದುಕಿನ ಕಾರ್ಯವನ್ನು ಕ್ರಮವಾಗಿ ಜೋಡಿಸಿ, ಒಳ್ಳೆಯ ಕೆಲಸಕ್ಕೆ ನಮ್ಮ ಸಮಯವನ್ನು ಬಳಸಿಕೊಳ್ಳಬೇಕು. ಆ ಮಾನದಂಡದಲ್ಲಿ ನಾವು ಯೋಚಿಸಿದರೆ, ನಮ್ಮ ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳಬಹುದು.

**ಬೋಸಮ್ಮ ಓ.**

# ಬದುಕಿಗೊಂದು ಯಶಸ್ವಿ ಸೂತ್ರ

ಇಂದ್ರಿಯಗಳಿಂದ ದಾಳಿಗೆ ಒಳಗಾಗುವ ಮನಸ್ಸು, ಬೇಕು-ಬೇಡಗಳೆಂಬ ಸಂಕಷ್ಟಗಳು, ಬದುಕು-ಬವಣೆ ಎಂಬ ಪಯಣ ಎಲ್ಲವೂ ಕೆಲವೊಂದು ಕ್ಷಣ ನಮ್ಮ ಆಕಾಂಕ್ಷೆಯನ್ನೋ ನಿರೀಕ್ಷೆಯನ್ನೋ ತಡೆದು ನಿಲ್ಲಿಸಿಬಿಡಬಹುದು. ಬದುಕಿನ ಮೇಲೆ ಒಲವು ಶಾಶ್ವತವಾಗಿರಬೇಕಾದರೆ ಅಲ್ಲೊಂದು ಗೆಲುವಿನ ಚಿಲುಮೆ ಇರಲೇಬೇಕು. ದೇಹವನ್ನಾಳುವ ಮನಸ್ಸು ಸ್ಥಿರ ಮತ್ತು ಸಮರ್ಥವಾಗಿದ್ದಲ್ಲಿ ಬದುಕಿನಲ್ಲಿ ಯಶಸ್ಸು ಸಾಧ್ಯ. ಇಂದ್ರಿಯಗಳ ಲಾಲಸೆಗೆ ಮನಸ್ಸು ಕರಗಿ ಹೋಗದೆ ಹಾಗೆ ಇರಬೇಕು ಎಂಬುದನ್ನು ಧರ್ಮ ಹೇಳುತ್ತದೆ. ಧರ್ಮದ ಹಾದಿ ಕಟುವಾಗಿ ಕಂಡರೂ ಅದು ಗೆಲುವಿಗೆ ಇರುವ ಒಂದೇ ಒಂದು ಮಾರ್ಗ. ಹಾಗಾಗಿ ಮನಸ್ಸು ನಿಯಂತ್ರಿಸಲ್ಪಡದೆ ಧರ್ಮವನ್ನು ಸುಲಭವಾಗಿ ಹಿಂಬಾಲಿಸಲಾಗದು.



ಜಗತ್ತು ಮನಸ್ಸನ್ನು ಚಂಚಲಗೊಳಿಸುವ ವಸ್ತು, ವ್ಯಕ್ತಿ ಮತ್ತು ಶಕ್ತಿಗಳಿಂದ ಕೂಡಿದೆ. ಇದ-ಕ್ಕೆ ಸುಲಭವಾಗಿ ಸೋಲುವುದು ನಮ್ಮ ದುರ್ಬಲ ಮನಸ್ಸು. ನಮ್ಮೊಳಗಿನ ವಿವೇಚನೆ, ಬುದ್ಧಿವಂತಿಕೆ ಎಲ್ಲವೂ ಸಮೃದ್ಧವಾಗಿರಲು ಮನಸ್ಸು ಸ್ಥಿರವಾಗಿರುವುದು ಬಹುಮುಖ್ಯ. ಹಾಗಾದರೆ ಈ ಮನಸ್ಸಿನ ತಳಮಳಗಳನ್ನು ನಿಯಂತ್ರಿಸುವ, ಬದುಕಿನ ಹಾದಿಯನ್ನೂ ಸುಗಮಗೊಳಿಸುವ ಸುಲಭ ವಿಧಾನ ಯಾವುದು?

ಯಾವಾಗಲೂ ತಮಸ್ಸನ್ನು ಕೋಪದಿಂದ ಕೆಡದಂತೆ ಕಾಪಾಡಿಕೊಳ್ಳಬೇಕಂತೆ.. ಕೋಪದ ಕೈಯಲ್ಲಿ ಮನಸ್ಸನ್ನು ಕೊಟ್ಟರೆ ಅದು ನಮ್ಮ ಇಡೀ ಜೀವನವನ್ನು ಕ್ಷಣಾರ್ಧದಲ್ಲಿ ನಾಶ ಮಾಡಿಬಿಡುತ್ತದೆ. ಕೋಪ ನಮ್ಮ ಗುರಿಯನ್ನು, ದಾರಿಯನ್ನು, ಜ್ಞಾನವನ್ನು, ಆಸೆ-ಆಕಾಂಕ್ಷೆಗಳನ್ನು ಕೊಂದುಬಿಡುತ್ತದೆ. ಹಾಗಾಗಿ ಯಾವ ಕ್ಷಣದಲ್ಲಿಯೂ ಮನಸ್ಸು ಉದ್ವಿಗ್ನಗೊಳ್ಳದ ಹಾಗೆ ಜಾಗರೂಕತೆ ಮಾಡಬೇಕು. ಇನ್ನೊಂದು, ಮಾತ್ಸರ್ಯದಿಂದ ನಮ್ಮ ಐಶ್ವರ್ಯವನ್ನು ನಾಶಮಾಡಿಕೊಳ್ಳಬಾರದು. ಮಾತ್ಸರ್ಯ ಹೆಚ್ಚುತ್ತ ಹೋದಾಗ ಪ್ರತಿಷ್ಠೆ, ಅಹಂಕಾರ ಬೆಳೆಯುತ್ತ ಹೋಗಿ ಅದೊಂದು ರೋಗವೇ ಆಗಿ ಬಿಡುತ್ತದಲ್ಲದೆ ನಮ್ಮಲ್ಲಿ ಇರುವ ಐಶ್ವರ್ಯವನ್ನೂ ನಿಧಾನವಾಗಿ ಕಳೆದುಕೊಳ್ಳುವಂತೆ ಮಾಡುತ್ತದೆ. ವಿದ್ಯೆ ಯಾರಿಂದಲೂ ಕದಿಯಲಾಗದ ಸಂಪತ್ತಾದರೂ ಕೂಡ ಅಪಮಾನಕ್ಕೆ ತುತ್ತಾಗದಂತೆ ಎಚ್ಚರಿಕೆವಹಿಸಬೇಕು. ಎಲ್ಲಿ ವಿದ್ಯೆ ಅಥವಾ ನಮ್ಮ ಜ್ಞಾನ ಅವಮಾನಕ್ಕೆ ಒಳಗಾಗುವುದೋ ಆಗ ನಮ್ಮೊಳಗಿನ ಶಕ್ತಿ ಕುಂದುತ್ತದೆ. ಬದುಕಿನ ಹಾದಿ ತಪ್ಪುತ್ತದೆ. ಇನ್ನು ಕೊನೆಯದಾಗಿ ಎಚ್ಚರ ಗೇಡಿತನದಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕು. ಸದಾಮನಸ್ಸು ಜಾಗ್ರತವಾಗಿರಬೇಕು. ಪ್ರತಿಯೊಂದು ನಿರ್ಧಾರದಲ್ಲಿಯೂ ಯೋಚನೆ.

ಕೋಪ, ಮಾತ್ಸರ್ಯ, ಅಪಮಾನ ಮತ್ತು ಎಚ್ಚರಗೇಡಿತನ ಬದುಕಿಗೆ ಯಾವಾಗಲೂ ಮಾರಕವಾಗಿರುವಂಥವುಗಳು. ಇವುಗಳಿಂದ ನಮ್ಮ ಗುರಿ, ಐಶ್ವರ್ಯ, ವಿದ್ಯೆ ಮತ್ತು ಎಚ್ಚರಿಕೆಯಿಂದ ನಮ್ಮನ್ನು ನಾವು ಕಾಪಾಡಿಕೊಂಡಾಗ, ಮನಸ್ಸು ಸ್ಥಿರವೂ ಸಮರ್ಥವೂ ಆಗಿ ಬದುಕು ಸುಲಲಿತವಾದ ದಾರಿಯಲ್ಲಿ ಸಾಗುವುದು.

**ನಿಸರ್ಗ ಸಿ.ಎ.**

**ಸಂಪಾದಕೀಯ ತಂಡ:** ಬೋಸಮ್ಮ ಓ., ಚಂದನ್ ಆರ್., ಕವನ ಕೆ.ವಿ., ಕಾವ್ಯ ಎನ್. **ಪುಟವಿನ್ಯಾಸ:** ಉಮೇಶ । ಇದು ಖಾಸಗಿ ಪ್ರಸಾರದ ಪ್ರಾಯೋಗಿಕ ಪತ್ರಿಕೆ । ಸಲಹೆಗಳಿಗೆ ಸ್ವಾಗತ
**ಅಧ್ಯಾಪಕ ಮಾರ್ಗದರ್ಶಕರು:** ಸಿಬಂತಿ ಪದ್ಮನಾಭ ಕೆ.ವಿ., ಪೃಥ್ವೀರಾಜ್ ಟಿ., ಅನನ್ಯ ಎಂ. **ಸುದ್ದಿ ಹಾಗೂ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳಿಸಿ:** journalismtut@gmail.com